


सरयू

# ಸರಯೂ

ವಿದ್ಯಾಕೇಂದ್ರ ವಾರ್ತಾಪತ್ರ

**SARAYU** - Kannada Monthly Regn. No. KARKAN/2014/62363

**Vol. : 8 Issue : 9 Month - February** 5123/ ಪ್ಲವ ಸಂವತ್ಸರ ಫೆಬ್ರವರಿ 2022 ಪುಟ 8 **Rs. 10/-**

Postal Regn No. PTR/136/2022-24
Licensed to Post without pre-payment
License No: SK/WPP/PTR/117/2022-24


ಆಜಾದಿ ಕಾ ಅಮೃತಮಹೋತ್ಸವ್ ನೆನಪಿನಲ್ಲಿ, ಸ್ವಾಮಿ ವಿವೇಕಾನಂದರ ಜನ್ಮದಿನಾಚರಣೆ (ರಾಷ್ಟ್ರೀಯ ಯುವದಿನ) ಅಂಗವಾಗಿ ವಿವಿಧ ಕಾರ್ಯಕ್ರಮಗಳು

## ಶ್ರೀರಾಮ ಪದವಿ ಕಾಲೇಜು ಆಯೋಜಿಸಿದ ದ.ಕ ಜಿಲ್ಲಾ ಪ.ಪೂ ಕಾಲೇಜುಗಳ ಫೆಸ್ಟ್ – ಆಜಾದಿ ಪರ್ವ

ದಿನಾಂಕ 11.01.2022













ಡಾ. ಪ್ರಭಾಕರ ಭಟ್ ಕಲ್ಲಡ್ಕ ಕಾರ್ಯಕ್ರಮ ಉದ್ಘಾಟಿಸಿದರು. "ಎದೆತುಂಬಿ ಹಾಡುವೆನು" ಖ್ಯಾತಿಯ ಸಂದೇಶ ನೀರುಮಾರ್ಗ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು.




"ರಾಷ್ಟ್ರೀಯ ಭಾವ ಜಾಗೃತಿಯನ್ನು ಮೂಡಿಸಿಕೊಳ್ಳೋಣ" ಎಂಬ ಪರಿಕಲ್ಪನೆಯ ಅಡಿಯಲ್ಲಿ ದ.ಕ ಜಿಲ್ಲೆಯ 18 ಕಾಲೇಜುಗಳ 420 ವಿದ್ಯಾರ್ಥಿಗಳು ಭಾಗವಹಿಸಿದ್ದ ಈ ಕಾರ್ಯಕ್ರಮದಲ್ಲಿ ಒಟ್ಟು 10 ವಿವಿಧ ಸ್ಪರ್ಧೆಗಳು ನಡೆದು, ಪುತ್ತೂರಿನ ವಿವೇಕಾನಂದ ಪ.ಪೂ ಕಾಲೇಜು ಸಮಗ್ರ ಹಾಗೂ ಇಂದ್ರಪ್ರಸ್ಥ ಪ.ಪೂ ಕಾಲೇಜು ಉಪ್ಪಿನಂಗಡಿ ರನ್ನರ್‌ಅಪ್ ಪ್ರಶಸ್ತಿ ಗಳಿಸಿತ್ತು. ವಿದ್ಯಾರ್ಥಿಗಳೇ ಎಲ್ಲಾ ಸ್ಪರ್ಧೆಗಳನ್ನು ಸಂಯೋಜಿಸಿದುದು ಈ ಕಾರ್ಯಕ್ರಮದ ವಿಶೇಷತೆಯಾಗಿತ್ತು.

**ವಿವೇಕಾಮೃತ ಸಿಂಚನ 12.01.22:** ಪ್ರೌಢಶಾಲಾ ವಿಭಾಗದ ಕಾರ್ಯಕ್ರಮದಲ್ಲಿ ಡಿವೈನ್ ಪಾರ್ಕ್ ಸಾಲಿಗ್ರಾಮ ಉಡುಪಿ ಇದರ ಮಹಿಳಾ ಮೇಲ್ವಿಚಾರಣಾ ಅಧಿಕಾರಿ ಪ್ರೇಮಾ ಪ್ರಭಾಕರ್, ರಾಷ್ಟ್ರ ಸೇವಿಕಾ ಸಮಿತಿ ದಕ್ಷಿಣ ಪ್ರಾಂತ ಕಾರ್ಯಕಾರಿಣಿ ಸದಸ್ಯೆ ಡಾ. ಕಮಲಾ ಪ್ರಭಾಕರ ಭಟ್, ಶ್ರೀ ಸುಧಾಕರ್, ಶ್ರೀ ಪ್ರಭಾಕರ, ಸಹ ಸಂಚಾಲಕರಾದ ಶ್ರೀ ರಮೇಶ್ ಎನ್ ಮತ್ತು ಮುಖ್ಯೋಪಾಧ್ಯಾಯರಾದ ಶ್ರೀಮತಿ ಶಾಂಭವಿ ಉಪಸ್ಥಿತರಿದ್ದರು.









ವಿವೇಕಾರ್ಚನೆ – ಪ.ಪೂ ವಿಭಾಗ



ವಿವೇಕಾನಂದಮಯಂ.... ಶ್ರೀರಾಮ ಪ್ರಾಥಮಿಕ ಶಾಲಾ ವಿಭಾಗದಲ್ಲಿ ವಿದ್ಯಾರ್ಥಿಗಳು ವಿವೇಕಾನಂದರ ವೇಷತೊಟ್ಟು ಸಂಭ್ರಮಿಸಿದರು.



**ಪೋಷಕರ ಸಮಾವೇಶ 28.1.22:** ಒಟ್ಟು 122 ಪೋಷಕರು ಭಾಗವಹಿಸಿದ್ದು ತಮ್ಮ ಮಗುವಿನಲ್ಲಾದ ಪರಿವರ್ತನೆಯನ್ನು ಹಂಚಿಕೊಂಡರು. ಹಿರಿಯರು ಪಾಲಕರ ಜವಾಬ್ದಾರಿಯನ್ನು ನೆನಪಿಸಿದರು.



**ಸಾಮೂಹಿಕ ಹುಟ್ಟುಹಬ್ಬ 31.1.22**

ಜನವರಿ ತಿಂಗಳಲ್ಲಿ ಹುಟ್ಟಿದ ಮಕ್ಕಳ ಹುಟ್ಟುಹಬ್ಬ ಕಾರ್ಯಕ್ರಮದಲ್ಲಿ ಶ್ರೀಮತಿ ಶಶಿಕಲಾ ಮಾತಾಜಿ ಪುಟಾಣಿಗಳಿಗೆ ಶುಭ ಹಾರೈಸಿದರು.



**ಮಕರ ಸಂಕ್ರಾಂತಿ ಉತ್ಸವ 14.01.2022:**

ವ್ಯವಸ್ಥಾಪನ ಸಮಿತಿ ಅಧ್ಯಕ್ಷರಾದ ಶ್ರೀಮತಿ ಮಲ್ಲಿಕಾ ಶೆಟ್ಟಿ ಸಂಕ್ರಾತಿಯ ವಿಶೇಷತೆಯನ್ನು ತಿಳಿಸಿದರು, ಬಳಿಕ ಎಳ್ಳು ಬೆಲ್ಲ ಹಂಚಲಾಯಿತು.

## ಪ್ರಾಥಮಿಕ ಶಾಲೆ



**ಸವಿರುಚಿ 04.01.2022**

1ನೇ ತರಗತಿಯ ಪರಿಸರ ಅಧ್ಯಯನದ ವಿಷಯಕ್ಕೆ ಸಂಬಂಧಿಸಿ "ಸವಿರುಚಿ" ಎಂಬ ಕಾರ್ಯಕ್ರಮದಲ್ಲಿ ಡಾ. ಪ್ರಭಾಕರ್ ಭಟ್, ಶ್ರೀ ವಸಂತ ಮಾಧವ ಮತ್ತಿತರರು ಮಕ್ಕಳಿಗೆ ತಿಂಡಿಯನ್ನು ಬಡಿಸಿ, ತಾವೂ ಸವಿದರು.



**ವಾರ್ಷಿಕ ಕ್ರೀಡಾಕೂಟ 6.1.2022**

ಪ್ರಾಥಮಿಕ ವಿಭಾಗದ 2021–22 ಸಾಲಿನ ವಾರ್ಷಿಕ ಕ್ರೀಡಾಕೂಟ ಶ್ರೀಯುತ ಡಾ। ಪ್ರಭಾಕರ್ ಭಟ್ ಕಲ್ಲಡ್ಕ ಇವರ ಉಪಸ್ಥಿತಿಯಲ್ಲಿ ನಡೆಯಿತು. ವಿದ್ಯಾರ್ಥಿಗಳಿಗೆ ವಿವಿಧ ಆಟೋಟ ಸ್ಪರ್ಧೆಗಳನ್ನು ನಡೆಸಲಾಯಿತು.



**ಸಾಂಪ್ರದಾಯಿಕ ಆಹಾರ ಪದ್ಧತಿ 7.1.2022**

ವಿದ್ಯಾರ್ಥಿಗಳಿಗೆ ಬಾಳೆ ಎಲೆ ಊಟದ ಅಭ್ಯಾಸ ನಡೆಯಿತು. ಶ್ರೀಮತಿ ರಾಜೇಶ್ವರಿ ಇದರ ಮಹತ್ವ ತಿಳಿಸಿದರು. 2ನೇ ತರಗತಿಯ ವಿದ್ಯಾರ್ಥಿಗಳಿಂದ ಇಂಗ್ಲೀಷ್, ಕನ್ನಡ ಹಾಡು ಹಾಗೂ ನೃತ್ಯ ಪ್ರದರ್ಶನ ನಡೆಯಿತು.



**ಮಕರ ಸಂಕ್ರಮಣ 14.1.2022**

ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಯೋಜನೆ ಮಂಡಳಿಯ ನಿರ್ದೇಶಕಿ ಶ್ರೀಮತಿ ಸುಲೋಚನಾ ಭಟ್ ಹಬ್ಬದ ಮಹತ್ವವನ್ನು ತಿಳಿಸಿದರು. ವಿದ್ಯಾರ್ಥಿಗಳಿಂದ ಹಾಡು ಹಾಗೂ ನೃತ್ಯ ಪ್ರದರ್ಶನ ನಡೆಯಿತು. ಕಾರ್ಯಕ್ರಮದ ಕೊನೆಯಲ್ಲಿ ಎಳ್ಳು ಬೆಲ್ಲ ಹಂಚಲಾಯಿತು.



**ಕ್ರೀಡಾ ಪ್ರತಿಭಾ ಪುರಸ್ಕಾರ 14.1.2022**

ಕ್ರೀಡಾಕೂಟದ ವಿಜೇತರಿಗೆ ಬಹುಮಾನ ವಿತರಿಸುವ ಕಾರ್ಯಕ್ರಮದಲ್ಲಿ ಶ್ರೀ.ಸೌ.ಸ.ನಿ. ಇದರ ನಿರ್ದೇಶಕರಾದ ರಾಕೋಡಿ ಈಶ್ವರ ಭಟ್, ಮಂಗಳೂರು ಗಣಪತಿ ಪ್ರೌಢಶಾಲೆಯ ನಿವೃತ್ತ ಅಧ್ಯಾಪಕರಾದ ಶ್ರೀರಾಮಚಂದ್ರ ಭಟ್, ಅಭಿವೃದ್ಧಿ ಸಮಿತಿ ಅಧ್ಯಕ್ಷರು, ಹಾಗೂ ಶಾ.ಶಿ. ನಿರ್ದೇಶಕರುಗಳು ಉಪಸ್ಥಿತರಿದ್ದರು.



**ನೇತಾಜಿ 125ನೇ ಜನ್ಮದಿನಾಚರಣೆ 24.1.22**

ರಾ.ಸ್ವಂ.ಸೇ ಸಂಘದ ತಾಲೂಕು ಕಾರ್ಯವಾಹ ಶ್ರೀ ಸುಜಿತ್ ಕೊಟ್ಟಾರಿ ನೇತಾಜಿಯವರ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು. ವೇದಿಕೆಯಲ್ಲಿ ನೆಟ್ಲ ಸದಾಶಿವ ದೇವಸ್ಥಾನದ ಆಡಳಿತ ಮಂಡಳಿಯ ಸದಸ್ಯರಾದ ಶ್ರೀಮತಿ ಸುಚಿತ್ರ, ಹಾಗೂ ಮುಖ್ಯೋಪಾಧ್ಯಾಯರು ಉಪಸ್ಥಿತರಿದ್ದರು.




**ಚಿತ್ರಕಲೆ ಸ್ಪರ್ಧೆ 27.1.2021**

ಅಕ್ಷರ ಕೋಚಿಂಗ್ ಸೆಂಟರ್ ಕಲ್ಲಡ್ಕದ ವತಿಯಿಂದ ಚಿತ್ರಕಲೆ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಮೊದಲ ಸುತ್ತಿನಲ್ಲಿ 190 ವಿದ್ಯಾರ್ಥಿಗಳು ಭಾಗವಹಿಸಿದ್ದು ಅದರಲ್ಲಿ 25 ವಿದ್ಯಾರ್ಥಿಗಳನ್ನು ಅಂತಿಮ ಸುತ್ತಿಗೆ ಆಯ್ಕೆ ಮಾಡಿ ಸ್ಪರ್ಧೆ ನಡೆಸಲಾಯಿತು.



**ಚಟುವಟಿಕೆ ಆಧಾರಿತ ಶಿಕ್ಷಣ**

ಚಟುವಟಿಕೆ ಆಧಾರಿತ ಶಿಕ್ಷಣಕ್ಕೆ ಪೂರಕವಾಗಿ ಬೇಕಾಗುವ ವಸ್ತುಗಳನ್ನು ಪೂರ್ವಗುರುಕುಲ ಎಲ್ಲಾ ಅಧ್ಯಾಪಕರು ಸೇರಿ ತಯಾರಿಸಿದ್ದು, 1ರಿಂದ 4ನೇ ತರಗತಿಯವರೆಗೆ ಕಲಿಕೆಗೆ ಪಠ್ಯಪುಸ್ತಕಗಳ ನಿಗದಿಪಡಿಸಿದ ಚಟುವಟಿಕೆಗಳ ಜೊತೆಗೆ ಈ ಯೋಜನೆಯನ್ನು ಅಳವಡಿಸಲಾಗಿದೆ.



**ಸೂರ್ಯನಮಸ್ಕಾರ** 31.1.2022ರಿಂದ

ಸ್ವಾತಂತ್ರ್ಯದ 75ನೇ ವರ್ಷಾಚರಣೆ ಪ್ರಯುಕ್ತ 75 ಕೋಟಿ ಸೂರ್ಯನಮಸ್ಕಾರ ಎಂಬ ಕಾರ್ಯಕ್ರಮವನ್ನು ದೇಶದಾದ್ಯಂತ ಹಮ್ಮಿಕೊಂಡಿದ್ದು, ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳು ಪ್ರತಿದಿನ ವಿಭಾಗವಾರು ಸೂರ್ಯನಮಸ್ಕಾರ ಆರಂಭಿಸಿರುತ್ತಾರೆ.

# ಸುಭಾಷಿತ ಮಂಜರಿ

ನ ದಾನಂ ನ ತಪೋ ನೇಜ್ಯಾ
ನ ಶೌಚಂ ನ ವ್ರತಾನಿ ಚ ।
ಪ್ರೀಯತೇSಮಲಯಾ ಭಕ್ತ್ಯಾ
ಹರಿರನ್ಯದ್ ವಿಡಂಬನಮ್ ॥

ಪರಮಾತ್ಮನನ್ನು ದಾನವಾಗಲೀ, ತಪಸ್ಸಾಗಲೀ, ಯಜ್ಞವಾಗಲೀ, ಶುಚಿತ್ವವಾಗಲೀ, ವ್ರತಗಳಾಗಲೀ ಸಂತೋಷಪಡಿಸುವುದಿಲ್ಲ. ನಿರ್ಮಲವಾದ ಭಕ್ತಿಯಿಂದಲೇ ಅವನು ಸಂತುಷ್ಟನಾಗುತ್ತಾನೆ. ಬೇರೆಲ್ಲಾ ಹಾಸ್ಯಾಸ್ಪದ.

### ಸಂಪಾದಕೀಯ

ಆತ್ಮೀಯ ಓದುಗರೆ,

ಸ್ವಾಮಿ ವಿವೇಕಾನಂದರ ಜನ್ಮದಿನವನ್ನು ನಿಮಿತ್ತವಾಗಿಟ್ಟುಕೊಂಡು ಎಲ್ಲಾ ವಿಭಾಗಗಳಲ್ಲಿ ಕಾರ್ಯಕ್ರಮಗಳನ್ನು ವೈಶಿಷ್ಟ್ಯಪೂರ್ಣವಾಗಿ ಆಚರಿಸಲಾಗಿದೆ. ಜೊತೆಗೆ ಎಲ್ಲಾ ವಿಭಾಗಗಳಲ್ಲಿ ವಾರ್ಷಿಕವಾಗಿ ನಡೆಯುತ್ತಿದ್ದ ಕ್ರೀಡಾಕೂಟ, ಸ್ಪರ್ಧೆಗಳು, ಸಾಂಸ್ಕೃತಿಕ ಚಟುವಟಿಕೆಗಳು ಈ ತಿಂಗಳಿನಲ್ಲಿ ಆಚರಿಸಲ್ಪಟ್ಟ ವರದಿಗಳಿರುವ ಸರಯೂ ಇದಾಗಿದೆ. ಅಂತೆಯೇ ಫೆಬ್ರವರಿ ತಿಂಗಳಲ್ಲಿ ನಡೆಯಲಿರುವ ರಥಸಪ್ತಮಿಯಂದು 75ಕೋಟಿ ಸೂರ್ಯನಮಸ್ಕಾರಕ್ಕೆ ಸಂಬಂಧಿಸಿ ತಯಾರಿಯೂ ನಡೆದಿದೆ. ಜೊತೆಗೆ ಮಾಲೆಗಾಂವ್ ಖ್ಯಾತಿಯ ಶ್ರೀ ಕರ್ನಲ್ ಶ್ರೀಕಾಂತ್ ಪ್ರಸಾದ್ ಪುರೋಹಿತ್‌ರ ಭೇಟಿ ನಮ್ಮೆಲ್ಲರ ಹೆಮ್ಮೆ ಎಂದುಕೊಂಡಿದ್ದೇವೆ. ಈ ಎಲ್ಲಾ ವರದಿಗಳೊಂದಿಗೆ ಸರಯೂ ನಿಮ್ಮ ಕೈಯಲ್ಲಿದೆ.

ಸಂಪಾದಕ ಬಳಗ


### ಸಂಪಾದಕೀಯ ಮಂಡಳಿ

**ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು :**
ನಾರಾಯಣ ಸೋಮಯಾಜಿ
ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ
**ಕಾರ್ಯನಿರ್ವಾಹಕ ಸಂಪಾದಕರು :**
ಕೃಷ್ಣಪ್ರಸಾದ ಕಾಯರ್‌ಕಟ್ಟೆ
**ಸಹಸಂಪಾದಕರು :**
ಪೂರ್ಣಿಮಾ (ಶಿಶುಮಂದಿರ)
ಚೈತ್ರ ಬಿ.ಕೆ (ಪ್ರಾಥಮಿಕ ಶಾಲೆ)
ಕೊಟ್ರೇಶ್ (ಪ್ರೌಢಶಾಲೆ)
ಲತಾ (ಪದವಿಪೂರ್ವ)
ಅಖಿಲಾ (ಪದವಿ)
**ವ್ಯವಸ್ಥಾಪಕ ಸಂಪಾದಕರು :** ಕುಶಾಲಪ್ಪ ಅಮ್ಜೂರು


# ಕಥನ 31

ಶ್ರೀರಾಮ ವಿದ್ಯಾಕೇಂದ್ರ
# ಕಥನವಾಹಿನಿ

ನಿರೂಪಣೆ
ಡಾ। ಪ್ರಭಾಕರ ಭಟ್, ಕಲ್ಲಡ್ಕ

(ವಿದ್ಯಾಕೇಂದ್ರದ ಚಿಂತನೆಯ ಮೂಲ, ಹುಟ್ಟು, ಬೆಳವಣಿಗೆ – ಸವಾಲುಗಳ ಕಥೆ)

## ಪ್ರೌಢಶಾಲಾ ಬೆಳವಣಿಗೆ – 1

ಪ್ರೌಢಶಾಲೆಯ ಆರಂಭದೊಂದಿಗೆ ಶ್ರೀರಾಮ ವಿದ್ಯಾಕೇಂದ್ರದ ಸ್ಥಾಪನೆಯಾಯಿತು ಎನ್ನಬಹುದು. ಶಾಲಾರಂಭದ ಕಥೆ–ವ್ಯಥೆಯನ್ನು ಹಿಂದಿನ ಸಂಚಿಕೆ(ಕಥನ–14)ಯಲ್ಲಿ ಹಂಚಿಕೊಂಡಿದ್ದೆ. ತದನಂತರದ ಸಂಚಿಕೆಗಳಲ್ಲಿ ಪ್ರೌಢಶಾಲಾ ವಿಭಾಗದ ಬೆಳವಣಿಗೆಯ ಬಗ್ಗೆ ಬರೆಯುವ ಅವಕಾಶವಾಗಿಲ್ಲ. ಅದಕ್ಕಾಗಿ ಈ ಸಂಚಿಕೆಯಲ್ಲಿ ಅದನ್ನು ಮುಂದುವರೆಸುತ್ತಿರುವೆ.

1980–81ರಲ್ಲಿ ಕಲ್ಲಡ್ಕ ಶ್ರೀರಾಮ ಮಂದಿರದಲ್ಲಿ ಆರಂಭಗೊಂಡ ಪ್ರೌಢ ಶಾಲಾ ವಿಭಾಗಕ್ಕೆ 1982ರಲ್ಲಿ ಹೊಸ ಕಟ್ಟಡ ನಿರ್ಮಾಣಕ್ಕೆ ನಿಷೇಧಾಜ್ಞೆಯ ಮಧ್ಯೆದಲ್ಲೂ ಪ.ಪೂ ಪೇಜಾವರ ಸ್ವಾಮೀಜೀಯವರು ಶಿಲಾನ್ಯಾಸಗೈದರು. ಬಳಿಕ 1984ರಿಂದ (ಈಗ ಪ್ರೌಢಶಾಲಾ ಕಟ್ಟಡವಿರುವ) ಹನುಮಾನ್ ನಗರದದಲ್ಲಿ ಹೊಸ, ಸ್ವಂತ ಕಟ್ಟಡಕ್ಕೆ ತರಗತಿಗಳು ಸ್ಥಳಾಂತರಗೊಂಡಿತು.

5 ಕೊಠಡಿಗಳು ಮತ್ತು 1 ಸಭಾಂಗಣದ ಹಂಚಿನ ಮೇಲ್ಛಾವಣಿಯ ಕಟ್ಟಡವು ಬಹುತೇಕ ಶ್ರಮದಾನದಿಂದಲೇ ಮೇಲೆದ್ದಿತ್ತು. ಸಭಾಂಗಣದ ಹಾಗೂ ತರಗತಿ ಕೊಠಡಿಗಳ ನೆಲಕ್ಕೆ ಸೆಗಣಿ ಸಾರಿಸಿದ ಚೊಕ್ಕಟಗೊಳಿಸಿದ ಸ್ಥಿತಿಯೇ ವೈಭವದ ಸ್ಥಿತಿಯಾಗಿತ್ತು !..

1985ರಲ್ಲಿ ಸರಕಾರದ ಅನುದಾನಕ್ಕೆ ಒಳಪಟ್ಟು 4 ಮಂದಿ ಶಿಕ್ಷಕರು ನೇಮಕಗೊಂಡರು. ಈ ಪೈಕಿ ಅದುವರೆಗೆ ಬಂಟ್ವಾಳ ಎಸ್.ವಿ.ಎಸ್ ಪ್ರೌಢಶಾಲೆಯಲ್ಲಿ ಶಿಕ್ಷಕರಾಗಿ ನೇಮಕವಾಗಿದ್ದ ಶ್ರೀ ವಸಂತ ಮಾಧವ ಅಲ್ಲಿಗೆ ರಾಜೀನಾಮೆ ನೀಡಿ ರಾಷ್ಟ್ರೀಯ ಚಿಂತನೆಯ ಅಡಿಯಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರೇರಣೆಯಿಂದ ನಡೆಯುತ್ತಿದ್ದ ಈ ವಿದ್ಯಾಕೇಂದ್ರಕ್ಕೆ ಮುಖ್ಯೋಪಾಧ್ಯಾಯರಾಗಿ ಸೇವೆಸಲ್ಲಿಸಲು ಕಟಿಬದ್ಧರಾದರು. ಅಲ್ಲಿಂದ ನಮ್ಮ ಚಿಂತನೆಗಳು ಮೂರ್ತ ಸ್ವರೂಪವನ್ನು ಪಡೆದುಕೊಳ್ಳಲು ಆರಂಭಿಸಿತು. ಅವರೊಂದಿಗೆ ಅಂದು ಶ್ರೀ ರಮೇಶ್ ಎನ್, ಶ್ರೀ ರಘುರಾಮ ಭಟ್, ಶ್ರೀ ಭವಾನಿಶಂಕರ್, ಶ್ರೀ ಲೋಕಯ್ಯ ಡಿ. ಇವರುಗಳು ಸಹಕಾರಿಗಳಾಗಿದ್ದರು.



ವರ್ಷಗಳು ಕಳೆದಂತೆ ಇಲ್ಲಿನ ಶಿಕ್ಷಣವನ್ನರಸಿ ಬರುವವರ ಸಂಖ್ಯೆ ಹೆಚ್ಚಾಗತೊಡಗಿತು. ಅದರಂತೆ ವಿಭಾಗಗಳು ಹಾಗೂ ಶಿಕ್ಷಕರನ್ನು ಹೆಚ್ಚುವರಿಯಾಗಿ ನಿಯೋಜಿಸಲಾಯಿತು. ಸಂಸ್ಕೃತ ಮತ್ತು ಕನ್ನಡವನ್ನು ಪ್ರಥಮಭಾಷೆಯಾಗಿ ಕಲಿಯಲು ಅಂದು ಅವಕಾಶವಿದ್ದ ತಾಲೂಕಿನ ಏಕೈಕ ಸಂಸ್ಥೆಯಾಗಿತ್ತು. ಇಂದು ಈ ಸಂಖ್ಯೆ ಬೆಳೆದು ಸಂಸ್ಕೃತ ಪ್ರಥಮ ಭಾಷೆಯಾಗಿ ಓದುತ್ತಿರುವ ಅತೀ ಹೆಚ್ಚು ವಿದ್ಯಾರ್ಥಿಗಳನ್ನು ಹೊಂದಿದ ರಾಜ್ಯದ ಏಕೈಕ ಸಂಸ್ಥೆಯಾಗಿ ರೂಪುಗೊಂಡಿದೆ.

1980–81ರಲ್ಲಿ 1 ವಿಭಾಗದೊಂದಿಗೆ ಪ್ರಾರಂಭಗೊಂಡ 8ನೇ ತರಗತಿ ಮರುವರ್ಷವೇ 2ವಿಭಾಗಕ್ಕೇರಿತು. 1982–83ರಲ್ಲಿ 9ನೇ ತರಗತಿಯೂ 2 ವಿಭಾಗಗಳಾಗಿ 10ನೇ ತರಗತಿಯ ಮೊದಲ ತಂಡ ಹೊರಬಂದಿತು. 1985 – 86ರಲ್ಲಿ 8ರ 3 ವಿಭಾಗ, 9ರ 2 ವಿಭಾಗ ಹಾಗೂ 10ನೇ ತರಗತಿಯ 2 ವಿಭಾಗಗಳು ನಮ್ಮಲ್ಲಿ ಇದ್ದವು. 2005–06ನೇ ಸಾಲಿನಲ್ಲಿ 8ರಿಂದ 10ನೇ ತರಗತಿಯವರೆಗೆ ಎಲ್ಲವೂ 4 ವಿಭಾಗಗಳಾಗಿ ಒಟ್ಟು 12 ತರಗತಿಗಳಲ್ಲಿ ಪಾಠ ಪ್ರವಚನಗಳು ನಡೆಯುತ್ತಿತ್ತು.

.....ಮುಂದುವರೆಯುವುದು

**ಅವಲೋಕನ ಬೈಠಕ್ 6.1.22**

ನವದಂಪತಿ ಸಮಾವೇಶದ ಅವಲೋಕನ ಬೈಠಕ್‌ನಲ್ಲಿ ಮಾತೆಯರು ತಮ್ಮ ಅನಿಸಿಕೆ ಅಭಿಪ್ರಾಯಗಳನ್ನು ಹಂಚಿಕೊಂಡರು. ಹಿರಿಯರಾದ ಡಾ. ಪ್ರಭಾಕರ ಭಟ್ ಮಾರ್ಗದರ್ಶನ ಮಾಡಿದರು. 20 ಮಾತೆಯರು ಪಾಲ್ಗೊಂಡಿದ್ದರು.

**ಮಕರ ಸಂಕ್ರಾಂತಿ 14.1.22**

ವಿದ್ಯಾಕೇಂದ್ರದ ಆಶ್ರಯದ ವಿವಿಧ ಶಿಶುಮಂದಿರಗಳಲ್ಲಿ ಮಕರ ಸಂಕ್ರಾಂತಿ ಉತ್ಸವವನ್ನು ಆಚರಿಸಲಾಯಿತು. ಶ್ರೀರಾಮ ಶಿಶುಮಂದಿರದ ಕಲ್ಲಡ್ಕ ವತಿಯಿಂದ ಕಲ್ಲಡ್ಕ ಪರಿಸರದ 292, ಶ್ರೀ ಗಣೇಶ ಶಿಶುಮಂದಿರ ಬೊಂಡಾಲ ಪರಿಸರದಲ್ಲಿ 90, ಶ್ರೀಕೃಷ್ಣ ಶಿಶುಮಂದಿರ ಸಜೀಪ 75, ಶ್ರೀ ಅಕ್ಕಮಹಾದೇವಿ ಶಿಶುಮಂದಿರ ಅಜ್ಜಿಬೆಟ್ಟು 110 ಹಾಗೂ ಸರಸ್ವತಿ ಶಿಶುಮಂದಿರ ಶೇಡಿಗುರಿಯ 105 ಮನೆಗಳಿಗೆ ತೆರಳಿ ಎಳ್ಳು-ಬೆಲ್ಲ-ಅರಶಿನ-ಕುಂಕುಮ-ಹೂವು ನೀಡಿ ಸಂಕ್ರಾತಿಯ ಶುಭಾಶಯವನ್ನು ಕೋರಲಾಯಿತು.

**ಸರಸ್ವತಿ ಶಿಶುಮಂದಿರ ಶೇಡಿಗುರಿ 17.1.22**

ಶ್ರೀ ಅಜಿತ್ ಕುಮಾರ್ ಇವರ ಪುಣ್ಯಸ್ಮರಣಾರ್ಥವಾಗಿ ಹೂವಿನ ಗಿಡಗಳನ್ನು ನೆಡಲಾಯಿತು. ಶ್ರೀರಾಮ ಶಿಶುಮಂದಿರದ ಆಡಳಿತ ಮಂಡಳಿ ಸದಸ್ಯೆಯಾದ ಶ್ರೀಮತಿ ಶಾಂತಕ್ಕ ಇವರು ಅಜಿತ್‌ಕುಮಾರ್‌ರ ಜೀವನ ಚರಿತ್ರೆಯನ್ನು ತಿಳಿಸಿದರು.

**ಪಾಲಕರ ಸಭೆ 28.1.22**

ಶ್ರೀರಾಮ ಶಿಶುಮಂದಿರದ ಪೋಷಕರ ಸಭೆಯು ಮಧುಕರ ಸಭಾಂಗಣದಲ್ಲಿ ನಡೆಯಿತು. ಶಿಶುಮಂದಿರದ ಪುಟಾಣಿಗಳ ಪ್ರಾರ್ಥನೆ ಮೂಲಕ ಬೈಠಕ್ ಪ್ರಾರಂಭ ಮಾಡಲಾಯಿತು.

* ಇಲ್ಲಿ ಸಂಸ್ಕಾರಯುತ ಶಿಕ್ಷಣ ಬಾಲ್ಯಾವಸ್ಥೆಯಲ್ಲಿಯೇ ಸಿಗುವ ಕಾರಣ ಈ ಶಾಲೆಗೆ ಸೇರಿಸಿದೆವು.

* ಮಗುವಿನಲ್ಲಾದ ಬದಲಾವಣೆ ಕಂಡು ಸಂತೋಷವಾಯಿತು.

* ಮಗುವಿನಲ್ಲಿ ಏಕಾಗ್ರತೆ ಶಕ್ತಿ ಹೆಚ್ಚಿದೆ,

* ಶಿಶುಮಂದಿರ ಪ್ರಾರಂಭವಾದ ನಂತರ ಮಕ್ಕಳು ಮೊಬೈಲ್‌ನಿಂದ ದೂರವಾಗಿದ್ದಾರೆ.

* ತನ್ನ ಕುಟುಂಬದ ಸದಸ್ಯರೊಂದಿಗೆ ಸೇರಿ ಪ್ರಾರ್ಥನೆ, ಭೋಜನ ಮಾಡುವುದು, ಶ್ಲೋಕ ಹೇಳುವುದು ಸಂತಸ ತಂದಿದೆ. ಎಂದು ಪಾಲಕರು ತಮ್ಮ ಮಕ್ಕಳಲ್ಲಾದ ಬದಲಾವಣೆಗಳನ್ನು ಹಂಚಿಕೊಂಡರು.

ಡಾ.ಪ್ರಭಾಕರ ಭಟ್ ಮಾರ್ಗದರ್ಶನದ ಮಾತುಗಳನ್ನಾಡಿದರು. ಸಂಚಾಲಕರಾದ ಶ್ರೀ ವಸಂತ ಮಾಧವ ಉಪಸ್ಥಿತರಿದ್ದರು.

ಸಭೆಯಲ್ಲಿ 122 ಜನ ಭಾಗವಹಿಸಿದ್ದರು. ಪೋಷಕರಾದ ಶ್ರೀಮತಿ ಅಶ್ವಿತಾ ಸ್ವಾಗತಿಸಿ, ಶ್ರೀಮತಿ ಪ್ರಮೀಳಾ ವಂದಿಸಿ, ಶ್ರೀಮತಿ ಶಿಲ್ಪಾ ಕಜೆ ನಿರೂಪಿಸಿದರು.

**ಇಂಗ್ಲೀಷ್ ಹಾಡು ಸ್ಪರ್ಧೆ 1.1.2022**

ಇಂಗ್ಲೀಷ್ ಪಠ್ಯಪುಸ್ತಕದ ಹಾಡನ್ನು ತರಗತಿವಾರು ಹಾಡುವ ಸ್ಪರ್ಧೆ ಆಯೋಜಿಸಿ, ಉತ್ತಮವಾಗಿ ಹಾಡಿದ ತರಗತಿಗೆ ಮುಖ್ಯೋಪಾಧ್ಯಾಯರು ಬಹುಮಾನ ನೀಡಿ ಅಭಿನಂದಿಸಿದರು.

**ಪರಿಸರದ ಶಿಕ್ಷಣ ಪ್ರಾತ್ಯಕ್ಷಿಕೆ 3.1.2022**

2ನೇ ತರಗತಿಯ ವಿದ್ಯಾರ್ಥಿಗಳಿಗೆ ಪರಿಸರದಲ್ಲಿ ಶಿಕ್ಷಣ ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಶಾಲಾ ಸುತ್ತಮುತ್ತಲಿನ ಪರಿಸರದಲ್ಲಿರುವ ವಿವಿಧ ರೀತಿಯ ಗಿಡಮರ ಬಳ್ಳಿಗಳನ್ನು ಮತ್ತು ಪ್ರೌಢ ಶಾಲಾ ವಿಭಾಗದ ಕೈ ತೋಟದಲ್ಲಿರುವ ತರಕಾರಿ, ಹೂಗಿಡಗಳ ಬಗ್ಗೆ ಶಿಕ್ಷಕರಾದ ಶ್ರೀ ಜಿನ್ನಪ್ಪ ಇವರು ವಿವರಣೆ ನೀಡಿದರು. .

**ವಿವೇಕಾನಂದ ಜಯಂತಿ 12.1.2022**

4ನೇ ತರಗತಿಯ ನಿನಾದ್ ಕೈರಂಗಳ ಹಾಗೂ ಅಧ್ಯಾಪಕರಾದ ವೇದಾವತಿ ಕೆ ಇವರು ವಿವೇಕಾನಂದರ ಜೀವನ – ಸಂದೇಶದ ಬಗ್ಗೆ ಮಾತನಾಡಿದರು. ಕಾರ್ಯಕ್ರಮದಲ್ಲಿ 1ರಿಂದ 7ನೇ ತರಗತಿಯ 180 ವಿದ್ಯಾರ್ಥಿಗಳು ವಿವೇಕಾನಂದರ ವೇಷಧರಿಸಿ ವೇದಿಕೆಯನ್ನು ಅಲಂಕರಿಸಿದ್ದರು. ಪ್ರಾಥಮಿಕ ವಿಭಾಗವು 33 ವರ್ಷಗಳನ್ನು ಪೂರೈಸಿದ ಹಿನ್ನಲೆಯಲ್ಲಿ 33 ವಿವೇಕಾನಂದರ ವೇಷಧಾರಿಗಳು 33 ವಿವೇಕಾವಾಣಿಯನ್ನು ಹೇಳಿದರು.

**ಭಜನೆ ಮತ್ತು ಸಾಮೂಹಿಕ ಹುಟ್ಟುಹಬ್ಬ 14.1.2022**

ಜನವರಿ ತಿಂಗಳಲ್ಲಿ ಹುಟ್ಟಿದ ಮಕ್ಕಳ ಹುಟ್ಟುಹಬ್ಬ ಕಾರ್ಯಕ್ರಮದಲ್ಲಿ ಡಾ। ಕಮಲಾ ಪ್ರಭಾಕರ್ ಭಟ್, ಬಂಟ್ವಾಳ ತಾಲೂಕಿನ ರಾಷ್ಟ್ರ ಸೇವಿಕಾ ಸಮಿತಿಯ ಕಾರ್ಯವಾಹಿಕ ಶ್ರೀಮತಿ ಪಣಿಪ, ಪೋಷಕರಾದ ಶ್ರೀಮತಿ ರಂಜಿನಿ ಹಾಗೂ ವಿಭಾಗ ಮುಖ್ಯಸ್ಥರು ಉಪಸ್ಥಿತರಿದ್ದರು.

**ಇಂಜೆಕ್ಷನ್ 21.1.2022**

1ನೇ ತರಗತಿಯವರಿಗೆ ಡಿ.ಪಿ.ಟಿ ಮತ್ತು 5ನೇ ತರಗತಿಯವರಿಗೆ ಟಿ.ಡಿ ಚುಚ್ಚುಮದ್ದನ್ನು ಪ್ರಾಥಮಿಕ ಆರೋಗ್ಯ ಕೇಂದ್ರ ಬಾಳ್ತಿಲ ಇವರಿಂದ ಕೊಡಿಸಲಾಯಿತು.

**ಸಂಸ್ಕೃತ ಗೀತೆ ಸ್ಪರ್ಧೆ 21.1.2022**

ಸಂಸ್ಕೃತ ಗೀತೆ ಹಾಡುವ ಸ್ಪರ್ಧೆಯಲ್ಲಿ ಉತ್ತಮವಾಗಿ ಹಾಡಿದ ತರಗತಿಗೆ ಮುಖ್ಯೋಪಾಧ್ಯಾಯರು ತರಗತಿವಾರು ಬಹುಮಾನ ನೀಡಿದರು.

**ಚೆಸ್ ಸ್ಪರ್ಧೆ 8.1.2021**

ಅಕ್ಷರ ಕೋಚಿಂಗ್ ಸೆಂಟರ್ ಕಲ್ಲಡ್ಕ ವತಿಯಿಂದ ಚೆಸ್ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಒಟ್ಟು 67 ವಿದ್ಯಾರ್ಥಿಗಳು ಭಾಗವಹಿಸಿರುತ್ತಾರೆ.

**ಪ್ರವಾಸ 13.1.2022 ಈ ಶೈಕ್ಷಣಿಕ ವರ್ಷದ ಪ್ರವಾಸವನ್ನು ಕೆಳಕಂಡಂತೆ ಆಯೋಜಿಸಲಾಯಿತು.**

**5ನೇ ತರಗತಿ :** ತಲಪಾಡಿ ದುರ್ಗಾಪರಮೇಶ್ವರಿ ದೇವಸ್ಥಾನ, ಸೋಮೇಶ್ವರ ಸೋಮನಾಥೇಶ್ವರ ದೇವಾಲಯ, ಮಡ್ಯಾರು ವೈಷ್ಣವಿ ದೇವಾಲಯ ಹಾಗು ಕಪಿಲ ಗೋಶಾಲೆಗೆ ಪ್ರವಾಸ ಹಮ್ಮಿಕೊಂಡಿದ್ದು ಒಟ್ಟು 173 ವಿದ್ಯಾರ್ಥಿಗಳು ಹಾಗೂ 7 ಅಧ್ಯಾಪಕರು ಭಾಗವಹಿಸಿದ್ದರು.

**6ನೇ ತರಗತಿ 7.1.2022 :** ಶಿಶಿಲೇಶ್ವರ ದೇವಸ್ಥಾನ, ಶಿಶಿಲ; ಸೌತಡ್ಕ ಮಹಾಗಣಪತಿ ದೇವಸ್ಥಾನ, ಕಾಮಧೇನು ಗೋಶಾಲೆ ಮತ್ತು ಉಪ್ಪಿನಂಗಡಿ ಸಹಸ್ರಲಿಂಗೇಶ್ವರ ದೇವಸ್ಥಾನಕ್ಕೆ 6ನೇ ತರಗತಿಯ ವಿದ್ಯಾರ್ಥಿಗಳು ಭೇಟಿ ನೀಡಿದರು. ಒಟ್ಟು 134 ವಿದ್ಯಾರ್ಥಿಗಳು, 7 ಅಧ್ಯಾಪಕರು ಭಾಗವಹಿಸಿದ್ದರು.

**7ನೇ ತರಗತಿ 4.1.2022 :** ಗೆಜ್ಜೆಗಿರಿ, ಹನುಮಗಿರಿ ಮತ್ತು ಪುತ್ತೂರು, ಕ್ಯಾಂಪ್ಕೋ ಸಂಸ್ಥೆಗೆ 7ನೇ ತರಗತಿಯ ಒಟ್ಟು 166 ವಿದ್ಯಾರ್ಥಿಗಳು ಹಾಗೂ 7 ಶಿಕ್ಷಕರು ಭೇಟಿ ನೀಡಿದರು

## ಪ್ರೌಢಶಾಲೆ

**ಯೋಗ ವ್ಯಾಯಾಮ 3.01.2022**

ಶ್ರೀರಾಮ ಪ್ರೌಢಶಾಲೆಯ ಎಲ್ಲಾ ವಿದ್ಯಾರ್ಥಿಗಳಿಗೆ ಶಾರೀರಿಕ ಹಾಗೂ ಬೌದ್ಧಿಕ ಸಮತೋಲನಕ್ಕೆ ಪೂರಕವಾಗುವಂತಹ ಯೋಗ ಮತ್ತು ವ್ಯಾಯಾಮವನ್ನೊಳಗೊಂಡ ಯೋಗವ್ಯಾಯಾಮ ಪ್ರತೀ ವಾರ ನಡೆಯುತ್ತಿದೆ.

**ವಿವೇಕಾಮೃತ ಸಿಂಚನ 12.01.22**

ವಿವೇಕಾನಂದ ಜಯಂತಿ ಅಂಗವಾಗಿ ವಿವೇಕಾಮೃತ ಸಿಂಚನ ಕಾರ್ಯಕ್ರಮದಲ್ಲಿ ವಿವೇಕಾನಂದರ ವೇಷಧರಿಸಿದ ವಿದ್ಯಾರ್ಥಿಗಳು ವಿವೇಕವಾಣಿ ಉದ್ಘೋಷಿಸಿದರು. ಸಭಾಕಾರ್ಯಕ್ರಮದಲ್ಲಿ ಕ್ರೀಡಾ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ನೀಡಲಾಯಿತು. ದೈಹಿಕ ಶಿಕ್ಷಣ ಶಿಕ್ಷಕರಾದ ಪುರುಷೋತ್ತಮ ಶ್ರೀಮಾನ್ ಮತ್ತು ಭಾಗ್ಯಶ್ರೀ ಮಾತಾಜಿ ವಿಜೇತರ ಪಟ್ಟಿಯನ್ನು ವಾಚಿಸಿದರು. ಕು. ವಾಸವಿ ಕೆ.ಸಿ. ನಿರೂಪಿಸಿ, ಕು ಅನುಷಾ ಸ್ವಾಗತಿಸಿ, ಕು ಚಿನ್ಮಯಿ ವಂದಿಸಿದಳು, ಶ್ರೀ ಶಿವರಾಜ್ ಶ್ರೀಮಾನ್ ಕಾರ್ಯಕ್ರಮವನ್ನು ಸಂಯೋಜಿಸಿದರು.

**ಮಕರ ಸಂಕ್ರಾತಿ ಆಚರಣೆ 14.01.2022**

ಮಕರ ಸಂಕ್ರಾತಿ ಉತ್ಸವದ ಮಹತ್ವವನ್ನು ಶ್ರೀ ಗೋಪಾಲ್ ಶ್ರೀಮಾನ್ ತಿಳಿಸಿದರು. ವೇದಿಕೆಯಲ್ಲಿ ಮುಖ್ಯ ಶಿಕ್ಷಕಿ ಶ್ರೀಮತಿ ಶಾಂಭವಿ ಉಪಸ್ಥಿತರಿದ್ದರು. ಕು. ದೀಕ್ಷಿತಾ ಮಾತಾಜಿ ನಿರ್ವಹಿಸಿ, ವಿದ್ಯಾರ್ಥಿ ಭೂಷಣ್ ಸ್ವಾಗತಿಸಿ, ಆಕಾಶ್ ವಂದಿಸಿದರು. ಎಲ್ಲಾ ವಿದ್ಯಾರ್ಥಿಗಳು ಎಳ್ಳು-ಬೆಲ್ಲ ಸವಿದರು.

**ತರಕಾರಿ ಬೆಳೆಯುವಲ್ಲಿ ವಿದ್ಯಾರ್ಥಿಗಳು 20.01.22**

ವಿದ್ಯಾರ್ಥಿಗಳೇ ಶಾಲಾ ಕೈತೋಟದಲ್ಲಿ ಬೆಳೆಸಿದ ಸಾವಯವ ಬಸಳೆ ಮತ್ತು ಸೋರೆಕಾಯಿಯನ್ನು ಮಧ್ಯಾಹ್ನದ ಬಿಸಿಯೂಟಕ್ಕೆ ನೀಡಲಾಯಿತು.

**73ನೇ ಗಣರಾಜ್ಯೋತ್ಸವ ಆಚರಣೆ 26.01.22**

ಪ್ರೌಢಶಾಲೆಯ ಹಿರಿಯ ವಿದ್ಯಾರ್ಥಿ, ಕಾಂಪ್ರಬೈಲು ಶ್ರೀ ಉಳ್ಳಾಲ್ತಿ ಕ್ಷೇತ್ರದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷರಾದ ಶ್ರೀ ಜಯಾನಂದ ಆಚಾರ್ಯ ಧ್ವಜಾರೋಹಣ ಮಾಡಿದರು. ಕಾರ್ಯಕ್ರಮದಲ್ಲಿ ಪ್ರೌಢಶಾಲೆಯ ಎನ್.ಸಿ.ಸಿ ವಿದ್ಯಾರ್ಥಿಗಳು ಘೋಷ್ ವಾದನದೊಂದಿಗೆ ಪಥಸಂಚಲನ ನಡೆಸಿದರು.

**ವಾರ್ಷಿಕ ಕ್ರೀಡಾಕೂಟ** 1.1.2022




ಪದವಿಪೂರ್ವ ಕಾಲೇಜಿನ ವಾರ್ಷಿಕ ಕ್ರೀಡಾಕೂಟವನ್ನು ಕಲ್ಲಡ್ಕ ರೈ.ವ್ಯ.ಸೇ.ಸಂಘದ ಅಧ್ಯಕ್ಷರೂ, ವಿದ್ಯಾಕೇಂದ್ರದ ಆಡಳಿತ ಮಂಡಳಿ ಸದಸ್ಯರಾದ ಶ್ರೀ ಪದ್ಮನಾಭ ಕೊಟ್ಟಾರಿ ಧ್ವಜಾರೋಹಣಗೈದು ಉದ್ಘಾಟಿಸಿದರು. ವಿದ್ಯಾ-ಕೇಂದ್ರದ ಕೋಶಾಧಿಕಾರಿ ಶ್ರೀ ಸತೀಶ್ ಭಟ್ ಶಿವಗಿರಿ, ಆಡಳಿತ ಮಂಡಳಿ ಸದಸ್ಯರು ಶ್ರೀ ನಾಗೇಶ್ ಕಲ್ಲಡ್ಕ ಹಾಗೂ ಪದವಿ ಪೂರ್ವ ವಿಭಾಗದ ಪ್ರಾಚಾರ್ಯರು ಶ್ರೀ ವಸಂತ ಬಲ್ಲಾಳ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

**ಅ. ಭಾ ವಿ. ಪರಿಷತ್ ಉದ್ಘಾಟನೆ 04.01.2022**



2021-22ನೇ ಸಾಲಿನ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಘಟಕವನ್ನು ಎ.ಬಿ.ವಿ.ಪಿ ಮಂಗಳೂರು ಜಿಲ್ಲಾ ಸಂಚಾಲಕ್, ಕರ್ನಾಟಕ ರಾಜ್ಯ ಕಾರ್ಯಕಾರಿಣಿ ಸದಸ್ಯರಾದ ಶ್ರೀ ನಿಶಾನ್ ಆಳ್ವ ಉದ್ಘಾಟಿಸಿ ಎ.ಬಿ.ವಿ.ಪಿ ಯ ಧ್ಯೇಯ ಉದ್ದೇಶ ತಿಳಿಸಿದರು. ಕಾರ್ಯಕ್ರಮದಲ್ಲಿ ಬಂಟ್ವಾಳ ತಾಲೂಕು ಸಂಚಾಲಕರಾದ ಶ್ರೀ ದಿನೇಶ್, ಉಪನ್ಯಾಸಕರಾದ ಅಶೋಕ್ ಕುಮಾರ್ ಉಪಸ್ಥಿತರಿದ್ದರು. ವಿದ್ಯಾರ್ಥಿಗಳಾದ ಶಮಿತ್ ಅಧ್ಯಕ್ಷ ಯತೀಶ್ ಉಪಾಧ್ಯಕ್ಷ, ಕಾರ್ಯದರ್ಶಿಯಾದ ದೀಪಕ್ ಕುಮಾರ್ ಹಾಗೂ ವಿದ್ಯಾರ್ಥಿನಿ ಪ್ರಮುಖ್ ಆಗಿ ಕು. ವಿಂದ್ಯಾಶ್ರೀ ಆಯ್ಕೆಯಾದರು.

**ಭಜನೆ ಮತ್ತು ಸಾಮೂಹಿಕ ಹುಟ್ಟುಹಬ್ಬ ಆಚರಣೆ**

ದಿನಾಂಕ 21.01.22 ರಂದು ಪದವಿ ಪೂರ್ವ ವಿಭಾಗದಲ್ಲಿ ಭಜನೆ ಹಾಗೂ ಜನವರಿ ತಿಂಗಳಲ್ಲಿ ಹುಟ್ಟಿದ ವಿದ್ಯಾರ್ಥಿಗಳ ಹುಟ್ಟುಹಬ್ಬ ಆಚರಿಸಲಾಯಿತು

**ಶಿಶುಮಂದಿರ, ಪ್ರಾಥಮಿಕ ಶಾಲೆಗೆ ಭೇಟಿ 6.1.22**



ವಾಣಿಜ್ಯ ಹಾಗೂ ಕಲಾ ವಿಭಾಗದ ವಿದ್ಯಾರ್ಥಿಗಳು ಶ್ರೀರಾಮ ಶಿಶುಮಂದಿರ ಹಾಗೂ ಪ್ರಾಥಮಿಕ ವಿಭಾಗಕ್ಕೆ ಭೇಟಿ ನೀಡಿ ಶೈಕ್ಷಣಿಕ ಚಟುವಟಿಕೆಗಳನ್ನು ವೀಕ್ಷಿಸಿದರು.

**ಬ್ಯಾಂಕ್ ಭೇಟಿ: 13.01.22**

ದ್ವಿತೀಯ ಪಿಯುಸಿ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳು ಶ್ರೀ ಗುರುದೇವ ವಿವಿಧೋದ್ದೇಶ ಸಹಕಾರ ಸಂಘ ನಿಯಮಿತ ಬ್ಯಾಂಕ್ ಕಲ್ಲಡ್ಕ ಶಾಖೆ, ಸುಮಂಗಳ ಸೌಹಾರ್ದ ಬ್ಯಾಂಕ್ ಕಲ್ಲಡ್ಕ, ವಿಶ್ವಕರ್ಮ ಸಹಕಾರ ಬ್ಯಾಂಕ್ ಕಲ್ಲಡ್ಕ ಹಾಗೂ ಶ್ರೀರಾಮಮಂದಿರದ ವಾಣಿಜ್ಯ ಸಂಕೀರ್ಣದಲ್ಲಿರುವ ಶ್ರೀರಾಮ ಸೌಹಾರ್ದ ಬ್ಯಾಂಕಿಗೆ ಭೇಟಿ ನೀಡಿ ವ್ಯವಹಾರಗಳ ಬಗ್ಗೆ ಮಾಹಿತಿ ಪಡೆದುಕೊಂಡರು.

**ಪ್ಲಾಸ್ಟಿಕ್ ಮುಕ್ತ ಪರಿಸರಕ್ಕೆ ಚಾಲನೆ 14.01.22**

ಪ್ಲಾಸ್ಟಿಕ್‌ಮುಕ್ತ ಪರಿಸರ ಪರಿಕಲ್ಪನೆ ಅಡಿಯಲ್ಲಿ ಉಪಯೋಗಿಸಿ ಬಿಸಾಡುವ ಪೆನ್ನುಗಳನ್ನು ಸಂಗ್ರಹಿಸಿ ವಿಲೇವಾರಿ/ಮರುಬಳಕೆ ಮಾಡುವ ಪ್ರಯತ್ನಕ್ಕೆ ಚಾಲನೆ ನೀಡಲಾಯಿತು.

**ತಂಬಾಕು ಮುಕ್ತ ಪರಿಸರ ಜಾಗೃತಿ 18.01.22**

ವಿದ್ಯಾರ್ಥಿಗಳು ಕಲ್ಲಡ್ಕ ಪರಿಸರದ ವಿವಿಧ ಅಂಗಡಿಗಳಿಗೆ ಭೇಟಿ ನೀಡಿ ತಂಬಾಕು ಮುಕ್ತ ಪರಿಸರಕ್ಕೆ ತಮ್ಮೊಂದಿಗೆ ಸಹಕರಿಸುವಂತೆ ಮನವಿ ಮಾಡಿದರು.

**ಸಾಂಸ್ಕೃತಿಕ ಸ್ಪರ್ಧೆ: 28.01.22 & 29.01.22**

ಆಜಾದ್ ಕೀ ಅಮೃತ ಮಹೋತ್ಸವದ ಪ್ರಯುಕ್ತ ಭಾವನ ಸಾಂಸ್ಕೃತಿಕ ಸಂಘದ ವತಿಯಿಂದ ಪದವಿ ಪೂರ್ವ ವಿಭಾಗದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳನ್ನು ಆಯೋಜಿಸಲಾಯಿತು.

**ಶಾಲಾ ಭೇಟಿ 29.01.22**



10ನೇ ತರಗತಿಯ ವಿದ್ಯಾರ್ಥಿಗಳಿಗೆ ವೃತ್ತಿಪರ ಮಾರ್ಗದರ್ಶನ ನೀಡುವ ಉದ್ದೇಶದಿಂದ ರಾಮಕೃಷ್ಣ ಪ್ರೌಢಶಾಲೆ ಪುತ್ತೂರು ರಾಮಕೃಷ್ಣ ಪ್ರೌಢಶಾಲೆ ಪಾವೂರು ಹರೇಕಳ ಇಲ್ಲಿಗೆ ಶ್ರೀ ತಿರುಮಲೇಶ್ವರ ಪ್ರಶಾಂತ್, ಶ್ರೀ ಲಕ್ಷ್ಮೀಶ ಮಯ್ಯ, ಶ್ರೀಮತಿ ಜಯಶ್ರೀ, ಭೇಟಿ ನೀಡಿದರು.

**ರಾಜ್ಯಮಟ್ಟದ ಕವನ ರಚನಾ ಸ್ಪರ್ಧೆಯಲ್ಲಿ ಪ್ರಥಮ**

ಶ್ರೀದೇವಿ ಸಂಯುಕ್ತ ಪದವಿಪೂರ್ವ ಕಾಲೇಜು ಹುಲೇಕಲ್ ಶಿರಸಿ, ಉತ್ತರ ಕನ್ನಡ ಇವರ ಆಶ್ರಯದಲ್ಲಿ ನಡೆದ ರಾಜ್ಯಮಟ್ಟದ ಕವನ ರಚನಾ ಸ್ಪರ್ಧೆಯಲ್ಲಿ ಶ್ರೀರಾಮ ಪದವಿಪೂರ್ವ ಕಾಲೇಜಿನ ದ್ವಿತೀಯ ವಾಣಿಜ್ಯ ವಿಭಾಗದ ಕುಮಾರಿ ಮನ್ವಿತಾ ಪ್ರಥಮ ಸ್ಥಾನ ಪಡೆದಿರುತ್ತಾರೆ.

**ಯುವ ಸಪ್ತಾಹದ 12.01.22:**

ರಾಷ್ಟ್ರೀಯ ಸೇವಾ ಯೋಜನೆ ಆಶ್ರಯದಲ್ಲಿ ರಾಷ್ಟ್ರೀಯ ಯುವ ದಿನದ ಆಚರಣೆ ಮತ್ತು ಯುವ ಸಪ್ತಾಹದ ಉದ್ಘಾಟನಾ ಸಮಾರಂಭದ ಮುಖ್ಯ ಅತಿಥಿಗಳಾಗಿ ಸರಕಾರಿ ಪ್ರಥಮದರ್ಜೆ ಮಹಾವಿದ್ಯಾಲಯ ಬೆಟ್ಟಂಪಾಡಿಯ ಪ್ರಾಂಶುಪಾಲರಾದ ಡಾ. ವರದರಾಜ ಚಂದ್ರಗಿರಿ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಶ್ರೀ ಕೃಷ್ಣಪ್ರಸಾದ್ ಕಾಯರ್‌ಕಟ್ಟೆ, ಶ್ರೀಮತಿ ಮಲ್ಲಿಕಾ ಶೆಟ್ಟಿ, ಸಂಯೋಜಕರಾದ ಯತಿರಾಜ್ ಪಿ, ಸಹಸಂಯೋಜಕಿಯಾದ ಕು. ದೀಕ್ಷಿತಾ ಉಪಸ್ಥಿತರಿದ್ದರು.

13.01.22 ಗೀತಾಭ್ಯಾಸ, 14.01.2022 ವಿವೇಕಚಿತ್ತ-ವಿವೇಕಚಿತ್ರ ಎಂಬ ಪರಿಕಲ್ಪನೆಯಡಿಯಲ್ಲಿ ವಿವೇಕಾನಂದರ ಚಿತ್ರ ಬಿಡಿಸುವ ಸ್ಪರ್ಧೆ, 15.01.2022 ವಿವೇಕ ಓದು-ಬರೆ ಪ್ರಬಂಧ ಸ್ಪರ್ಧೆ, 16.01.2022 ಮನೆ ಮನೆಗೆ ವಿವೇಕ ಸಂದೇಶ 17.01.2022 ಏಕಾಗ್ರತ ಧ್ಯಾನ ಪ್ರೇರಣಾ ಸಭಾಭವನದಲ್ಲಿ ನಡೆಯಿತು. ಯೋಗ ತರಬೇತುದಾರ ಕುಮಾರ್ ಜೀ ಧ್ಯಾನ ಕಾರ್ಯಕ್ರಮ ನಿರ್ವಹಿಸಿದರು. 18.01.2022-ವಿವೇಕಾನಂದರ ಜೀವನ ಚರಿತ್ರೆಯ ಚಲನಚಿತ್ರ ವಿದ್ಯಾರ್ಥಿಗಳಿಗೆ ದೃಶ್ಯಮಾಧ್ಯಮದ ಮೂಲಕ ತೋರಿಸಲಾಯಿತು.

**ಪ್ಲಾಸ್ಟಿಕ್ ಮುಕ್ತ ಪರಿಸರ 14.01.22**



ಪರಿಸರ ಸಂಘದ ವತಿಯಿಂದ ಪ್ಲಾಸ್ಟಿಕ್ ಮುಕ್ತ ಪರಿಸರ ಪರಿಕಲ್ಪನೆಯಡಿಯಲ್ಲಿ ಉಪಯೋಗಿಸಿ ಬಿಸಾಡುವ ಪೆನ್ನುಗಳನ್ನು ಸಂಗ್ರಹಿಸಿ, ಗ್ರಾಮಪಂಚಾಯಿತಿಯ ಸಹಯೋಗದೊಂದಿಗೆ ಮರುಬಳಕೆ ಮಾಡುವ ಪ್ರಯತ್ನದ ಭಾಗವಾಗಿ ಚಾಲನೆ ನೀಡಲಾಯಿತು.

**ಮುಕ್ತ ಚೆಸ್ ಪಂದ್ಯಾಟದಲ್ಲಿ ಸಾಧನೆ 14.01.22**

ದ. ಕ ಜಿಲ್ಲಾಡಳಿತ, ದ.ಕ ಜಿ. ಪಂ, ಮಂಗಳೂರು ಮ.ಪಾಲಿಕೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ದ.ಕ. ಜಿಲ್ಲೆ ಇವರ ಸಹಯೋಗದೊಂದಿಗೆ ನಡೆದ ಮುಕ್ತ ಚೆಸ್ ಪಂದ್ಯಾಟದಲ್ಲಿ ಪ್ರಥಮ ಬಿ.ಸಿ.ಎ ವಿದ್ಯಾರ್ಥಿನಿ ಕು. ಯಶಸ್ವಿ. ಕೆ ಇವರು ಚೆಸ್ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದಿರುತ್ತಾರೆ.

**ಖೋಖೋ ತಂಡಕ್ಕೆ ಅಭಿನಂದನೆ 14.1.22**

ಪುತ್ತೂರಿನ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ ನಡೆದ ಮಂಗಳೂರು ವಿಶ್ವವಿದ್ಯಾನಿಲಯ ಅಂತರ್ ಕಾಲೇಜು ಖೋ-ಖೋ ಚಾಂಪಿಯನ್ ಶಿಪ್ ಫಾರ್ ವುಮೆನ್-2021-22ನಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿರುತ್ತಾರೆ ಇವರಿಗೆ ಅಭಿನಂದನೆ ಪತ್ರ ಕೊಟ್ಟು ಗೌರವಿಸಲಾಯಿತು.

**ಪಂದ್ಯಾಟದಲ್ಲಿ ಸಾಧನೆ 14.01.22**

ಮಾತೆ ಶಾರದಾದೇವಿಯ 169ನೇ ಜನ್ಮದಿನದ ಅಂಗವಾಗಿ ರಾಮಕೃಷ್ಣ ತಪೋವನ ಪೊಳಲಿ ಇವರು ಆಯೋಜಿಸಿದ್ದ ಸ್ಪರ್ಧೆಗಳಲ್ಲಿ ಕು. ಕೀರ್ತಿ-2 ಬಿ.ಕಾಂ., ಕು. ಗೌತಮಿ-2 ಬಿ.ಕಾಂ., ಕು. ಲಾವಣ್ಯ-1 ಬಿ.ಕಾಂ., ಕು. ಪ್ರತೀಕ್ಷಾ-2 ಬಿ.ಎಸ್ಸಿ ಭಾಗವಹಿಸಿ ಪ್ರಶಸ್ತಿಗಳನ್ನು ಪಡೆದಿರುತ್ತಾರೆ.

**ಅಥ್ಲೆಟಿಕ್ ಪಟುಗಳಿಗೆ ಅಭಿನಂದನೆ 14.01.22**

ಆಳ್ವಾಸ್ ಕಾಲೇಜಿನಲ್ಲಿ ನಡೆದ ಮಂಗಳೂರು ವಿಶ್ವವಿದ್ಯಾನಿಲಯ ಅಂತರ್ ಕಾಲೇಜು ಅಥ್ಲೆಟಿ-ಕ್ ಚಾಂಪಿಯನ್ ಶಿಪ್ 2021-22ನಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿರುತ್ತಾರೆ ಇವರಿಗೆ ಅಭಿನಂದನೆ ಪತ್ರ ಕೊಟ್ಟು ಗೌರವಿಸಲಾಯಿತು.

**ಸೂರ್ಯನಮಸ್ಕಾರ ಅಭ್ಯಾಸ 14.01.22**



ರಾಷ್ಟ್ರೀಯ ಸೇವಾ ಯೋಜನೆಯ ಕಲ್ಲಡ್ಕ ಘಟಕ ಆಯೋಜಿಸಿದ ಸೂರ್ಯನಮಸ್ಕಾರ ಯಜ್ಞದಲ್ಲಿ ವಿದ್ಯಾರ್ಥಿಗಳು ಭಾಗವಹಿಸಿದರು.

**ಸೇನಾ ದಿನದ ಮಹತ್ವ 17.01.22**

ಮಿಲಿಟರಿ ಮಾರ್ಗದರ್ಶನ ಘಟಕ ಸೇನಾ ದಿನದ ಪ್ರಯುಕ್ತ ಆಯೋಜಿಸಿದ ಕಾರ್ಯಕ್ರಮದಲ್ಲಿ ದ್ವಿತೀಯ ಬಿ.ಎಸ್ಸಿ ವಿದ್ಯಾರ್ಥಿ ಜೈದೀಪ್ ಸೇನಾ ದಿನದ ಹಾಗೂ ಸೈನಿಕರ ಮಹತ್ವದ ಬಗ್ಗೆ ಮಾತನಾಡಿದರು. ವಾಣಿಜ್ಯಶಾಸ್ತ್ರ ಉಪನ್ಯಾಸಕ ಶ್ರೀ ರಂಜಿತ್ ಉಪಸ್ಥಿತರಿದ್ದರು.

**ಭವಿಷ್ ಘಟಕದಿಂದ ಕಾರ್ಯಕ್ರಮ 20.01.22**

ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಭವಿಷ್ ಘಟಕದ ಕಾರ್ಯವೈಖರಿ, ಅದರ ಮಹತ್ವ ಹಾಗೂ ಪ್ರಯೋಜನದ ಬಗ್ಗೆ ಪ್ರಾಂಶುಪಾಲರು ವಿವರ ನೀಡಿದರು. ನಂತರ ಗುರುರಾಜ್ ಕರ್ಜಗಿಯವರ ಶಿಕ್ಷಕರ ಉದಾತ್ತ ಮೌಲ್ಯಧಾರಿತ ಗುಣಗಳ ಬಗೆಗಿನ ಭಾಷಣದ ತುಣುಕುಗಳನ್ನು ವಿಡಿಯೋದ ಮುಖಾಂತರ ವೀಕ್ಷಿಸುವಂತೆ ಅವಕಾಶ ಮಾಡಿ ಕೊಡಲಾಯಿತು.

**ಫಿಸಿಕಲ್ ಫಿಟ್‌ನೆಸ್ ಟ್ರೈನಿಂಗ್ 21.01.22**

ಮಿಲಿಟರಿ ಮಾರ್ಗದರ್ಶಕ ಘಟಕದಿಂದ ಫಿಸಿಕಲ್ ಫಿಟ್‌ನೆಸ್ ಟ್ರೈನಿಂಗ್ ನಡೆಯಿತು.

**ಮಾಸಿಕ ಭಜನೆ - ಮಕರ ಸಂಕ್ರಾಂತಿ 21.01.22**

ಅಂತಿಮ ವರ್ಷದ ವಿದ್ಯಾರ್ಥಿಗಳಿಂದ ಮಾಸಿಕ ಭಜನೆ ನಡೆಯಿತು. ಅರ್ಥಶಾಸ್ತ್ರ ಉಪನ್ಯಾಸಕಿಯಾದ ಸಂಧ್ಯಾಕುಮಾರಿ ಇವರು ಭಜನೆ ಮಾಡುವುದರಿಂದ ಆಗುವ ಉಪಯೋಗ ಮತ್ತು ಮಕರಸಂಕ್ರಾತಿಯ ಮಹತ್ವವನ್ನು ತಿಳಿಸಿದರು. ವಿದ್ಯಾರ್ಥಿನಿಯರು ಎಳ್ಳು ಬೆಲ್ಲ ತಯಾರಿಸಿ ಹಂಚಿದರು.

**ಪೋಸ್ಟರ್ ಮೇಕಿಂಗ್‌ಲ್ಲಿ ತೃತೀಯ ಬಹುಮಾನ**

ನ್ಯಾಷನಲ್ ವೋಟರ್ಸ್ ಡೇ ಪ್ರಯುಕ್ತ ದ.ಕ ಜಿಲ್ಲಾ ಮಟ್ಟದ ಸ್ಪರ್ಧೆಗಳಲ್ಲಿ ಶ್ರೀರಾಮಪದವಿ ಕಾಲೇಜಿನ ಅಂತಿಮ ಬಿ.ಕಾಂ ದೀಕ್ಷಿತಾ ಎಂ ಇವರು ಪೋಸ್ಟರ್ ಮೇಕಿಂಗ್ ಸ್ಪರ್ಧೆಯಲ್ಲಿ ತೃತೀಯ ಬಹುಮಾನ ಪಡೆದಿದ್ದಾರೆ.

**ರಸಪ್ರಶ್ನೆ ನಾಲ್ಕನೇ ಸ್ಥಾನ 23.01.22**

ಶೇಣಿ ಗೋಪಾಲಕೃಷ್ಣ ಭಟ್ ಚಾರಿಟೇಬಲ್ ಟ್ರಸ್ಟ್ ಇವರು ಗೋವಿಂದದಾಸ್ ಕಾಲೇಜು ಸುರತ್ಕಲ್‌ನಲ್ಲಿ ಆಯೋಜಿಸಿದ ಮಂಗಳೂರು ವಿಶ್ವವಿದ್ಯಾನಿಲಯ ಮಟ್ಟದ ಯಕ್ಷಗಾನ-ಪುರಾಣ-ಸಾಹಿತ್ಯ-ರಸ ಪ್ರಶ್ನೆಯಲ್ಲಿ ಅಂತಿಮ ವರ್ಷದ ಬಿಕಾಂ ವಿದ್ಯಾರ್ಥಿಗಳಾದ ಧನ್ಯ ಮತ್ತು ಪೃಥ್ವಿ ನಾಲ್ಕನೇ ಸ್ಥಾನವನ್ನು ಪಡೆದಿರುತ್ತಾರೆ.

**ರಾಷ್ಟ್ರೀಯ ಮತದಾರರ ದಿನಾಚರಣೆ 25.01.22**

ಮತದಾರರ ಸಾಕ್ಷರತಾ ಘಟಕ ಹಾಗೂ ರಾಜ್ಯಶಾಸ್ತ್ರ ವಿಭಾಗದ ವತಿಯಿಂದ ರಾಷ್ಟ್ರೀಯ ಮತದಾರರ ದಿನದ ಪ್ರಯುಕ್ತ ಉಪನ್ಯಾಸ ಕಾರ್ಯಗಾರವನ್ನು ಆನ್ಲೈನ್ ಮೂಲಕ ನಡೆಸಲಾಯಿತು. ಈ ಕಾರ್ಯಕ್ರಮಕ್ಕೆ ಅಭ್ಯಾಗತರಾಗಿ ಬಂಟ್ವಾಳ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಶ್ರೀ ಬಾಲಸುಬ್ರಹ್ಮಣ್ಯ ಪಿ.ಎಸ್‌ರವರು ದಿನದ ವಿಶೇಷತೆಯನ್ನು ತಿಳಿಸಿಕೊಟ್ಟರು. ರಾಜ್ಯಶಾಸ್ತ್ರ ಉಪನ್ಯಾಸಕಿಯಾದ ಶ್ರೀಮತಿ ಜಯಲಕ್ಷ್ಮಿ ಮಾತಾಜಿ ಮತದಾನದ ಪ್ರತಿಜ್ಞಾ ವಿಧಿಯನ್ನು ಭೋಧಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರು ವಹಿಸಿದ್ದರು. ಮತದಾರರ ಸಾಕ್ಷರತಾ ಘಟಕದ ಸಂಯೋಜಕರಾದ ಶ್ರೀ ಗಂಧರ್ವ ಶ್ರೀಮಾನ್ ಉಪಸ್ಥಿತರಿದ್ದರು. ದ್ವಿತೀಯ ಬಿ.ಎ ಪ್ರಜ್ವಲ್ ಸ್ವಾಗತಿಸಿ,ಅಂತಿಮ ಬಿ.ಕಾಂ ಲಾವಣ್ಯ ವಂದಿಸಿ ತೃತೀಯ ಬಿ.ಎ ಉಷಾ ನಿರೂಪಿಸಿದರು.

**ಅಧ್ಯಯನ ಪ್ರವಾಸ 26.01.22**

ಪ್ರಭಾಸ ಮಾನವಿಕ ಸಂಘ ಆಯೋಜಿಸಿದ ಅಧ್ಯಯನ ಪ್ರವಾಸದಲ್ಲಿ ಉಡುಪಿ, ಕಾರ್ಕಳ, ಮೂಡಬಿದರೆ ಹಾಗೂ ಮಲ್ಪೆಗೆ ಭೇಟಿ ನೀಡಿ-ದರು.

**ಇಂಡಸ್ಟ್ರಿಯಲ್ ವಿಸಿಟ್ 26.01.22**

ಪ್ರಬೋಧ ವಾಣಿಜ್ಯ ಸಂಘದ ವಿದ್ಯಾರ್ಥಿಗಳು ಕೋಡಪದವು ಎಕೊಬ್ಲಿಸ್ ಹಾಳೆತಟ್ಟೆ ತಯಾರಿಕಾ ಘಟಕ, ಪುತ್ತೂರಿನ ಕೋಕೋ ಗುರು, ಯಸ್.ಡಿ.ಪಿ ರೆಮಿಡಿಸ್ & ರಿಸರ್ಚ್ ಸೆಂಟರ್ ಮತ್ತು ಮಹಾಲಿಂಗೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿದರು. 106 ವಿದ್ಯಾರ್ಥಿಗಳು 4 ಉಪನ್ಯಾಸಕರು ಭಾಗವಹಿಸಿದ್ದರು.

**ಚರ್ಚಾಕೂಟ 27.01.22**

ಭವಿಷ್ ಘಟಕ ವತಿಯಿಂದ ವಿದ್ಯಾರ್ಥಿಗಳಿಗೆ ಚರ್ಚಾಕೂಟವನ್ನು ಏರ್ಪಡಿಸಲಾಯಿತು. ಎರಡು ತಂಡಗಳನ್ನು ರಚಿಸಿ ಆನ್ಲೈನ್ ತರಗತಿಯ ಪ್ರಯೋಜನ ಮತ್ತು ದುಷ್ಪರಿಣಾಮದ ಬಗ್ಗೆ ಚರ್ಚಿಸಲಾಯಿತು. ಇತಿಹಾಸ ಉಪನ್ಯಾಸಕರಾದ ಶ್ರೀ ಗಂಧರ್ವ ನಡೆಸಿಕೊಟ್ಟರು.

**ಮಾಹಿತಿ ಕಾರ್ಯಾಗಾರ 28.01.22**

ಪ್ರಭಾಸ ಮಾನವಿಕ ಸಂಘ ಹಾಗೂ ರಾಜ್ಯಶಾಸ್ತ್ರ ವಿಭಾಗದ ವತಿಯಿಂದ ಸರ್ಕಾರದ ಯೋಜನೆಗಳ ಮಾಹಿತಿ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಯಿತು. ಬಂಟ್ವಾಳ ನಗರ ಪ್ರಾಧಿಕಾರ ಬೂಡ ಇದರ ಅಧ್ಯಕ್ಷರಾದ ಶ್ರೀ ದೇವದಾಸ್ ಶೆಟ್ಟಿಯವರು ಆಗಮಿಸಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿವಿಧ ಯೋಜನೆಗಳ ಬಗ್ಗೆ ತಿಳಿಸಿಕೊಟ್ಟರು. ಅಧ್ಯಕ್ಷತೆಯನ್ನು ವಾಣಿಜ್ಯ ವಿಭಾಗದ ಮುಖ್ಯಸ್ಥರಾದ ಶ್ರೀ ರಂಜಿತ್ ಶ್ರೀಮಾನ್ ವಹಿಸಿದ್ದರು.

**ಕಾಲೇಜು ಕೈತೋಟದ ಸ್ವಚ್ಚತೆ 29.01.22**

ರಾಷ್ಟ್ರೀಯ ಸೇವಾ ಯೋಜನೆಯ ದ್ವಿತೀಯ ವರ್ಷದ ವಿದ್ಯಾರ್ಥಿಗಳು ಕಾಲೇಜಿನ ಮುಂಭಾಗದ ಕೈತೋಟವನ್ನು ಸ್ವಚ್ಚಗೊಳಿಸಿದರು. 66 ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ವಸತಿನಿಲಯ

**ಕಿರುಪ್ರವಾಸ 01.01.22**



ವಸತಿ ನಿಲಯದ ವತಿಯಿಂದ ಪದವಿ ವಿಭಾಗದ ವಸತಿ ವಿದ್ಯಾರ್ಥಿಗಳಿಗೆ ನೆಲ್ಲಿತೀರ್ಥ, ಕಟೀಲು ದೇವಸ್ಥಾನಕ್ಕೆ ಕಿರು ಪ್ರವಾಸ ಹಮ್ಮಿಕೊಳ್ಳಲಾಯಿತು.

**ವಸತಿನಿಲಯ ಬಾಲಕಿಯರ ಪ್ರವಾಸ 02.01.22**



ಶ್ರೀರಾಮ ಬಾಲಕಿಯರ ವಸತಿ ನಿಲಯದಿಂದ ಕೊಡಿಯಡ್ಕ ದೇವಾಲಯ, ಸೀತಾ ಫಾಲ್ಸ್, ಉಡುಪಿ ಶ್ರೀಕೃಷ್ಣ ದೇವಾಲಯ, ಮಲ್ಪೆ ಬೀಚ್‌ಗೆ ಕಿರುಪ್ರವಾಸವನ್ನು ಹಮ್ಮಿಕೊಳ್ಳಲಾಯಿತು.




**ನೌಕಾದಳದ ಕಾರ್ಯಾಗಾರ: 75** ವಿದ್ಯಾರ್ಥಿಗಳ ಎನ್.ಸಿ.ಸಿ. ನೇವಿ ಘಟಕದ ತರಬೇತಿ ಕಾರ್ಯಾಗಾರಕ್ಕೆ ಡಾ। ಪ್ರಭಾಕರ್ ಭಟ್ ಚಾಲನೆ ನೀಡಿದರು. ಎನ್.ಸಿ.ಸಿ. ಘಟಕದ ತರಬೇತುದಾರ, ಮಂಗಳೂರು ನೇವಿಯ ಯುನಿಟ್‌ನ ಪಿ.ಎ ಸ್ಟಾಫ್ ಶ್ರೀ ಅಮಿತ್‌ಕುಮಾರ್ ಪಿಒ(ಯುಎಸ್)ಮತ್ತು ಪಿ.ಎ ಸ್ಟಾಫ್ ಶ್ರೀ ಸಂತೋಷ್ ಕುಮಾರ್ ಪಿಒ(4ಡಬ್ಲ್ಯೂ) ಇವರುಗಳು ನಡೆಸಿಕೊಟ್ಟರು. ಮುಖ್ಯೋಪಾಧಾಯರು ಶ್ರೀಮತಿ ಶಾಂಭವಿ, ಶಾಲಾ ಎನ್.ಸಿ.ಸಿ. ಪ್ರಮುಖರು ಶ್ರೀ ಪುರುಷೋತ್ತಮ ಉಪಸ್ಥಿತರಿದ್ದರು.




**ವಾರ್ಷಿಕ ಕ್ರೀಡಾಕೂಟ:** ಡಾ। ಪ್ರಭಾಕರ್ ಭಟ್ ಕಲ್ಲಡ್ಕ ಉದ್ಘಾಟಿಸಿದರು. ಗೋಳ್ತಮಜಲು ಪಂಚಾಯತ್‌ನ ಸದಸ್ಯರುಗಳಾದ ಶ್ರೀ ಜಯಂತ್ ಗೌಡ, ಮತ್ತು ಶ್ರೀ ಎಲಿಯಾಸ್ ಡಿ.ಸೋಜ ಅಮ್ಟೂರು, ಕಲ್ಲಡ್ಕ ರೈ.ಸೇ.ಸ. ಸಂಘದ ನಿರ್ದೇಶಕರು ಶ್ರೀ ಪೂವಪ್ಪ ಟೈಲರ್, ಕಾಂಪ್ರಬೈಲು ಶ್ರೀ ಉಳ್ಳಾಲ್ತಿ ದೈವಸ್ಥಾನದ ವ್ಯವಸ್ಥಾಪನ ಸಮಿತಿಯ ಅಧ್ಯಕ್ಷರು ಶ್ರೀ ಜಯಾನಂದ ಆಚಾರ್ಯ, ವಿದ್ಯಾಕೇಂದ್ರದ ಸಂಚಾಲಕರಾದ ಶ್ರೀ ವಸಂತ ಮಾಧವ, ಮುಖ್ಯೋಪಾಧ್ಯಾಯರಾದ ಶ್ರೀಮತಿ ಶಾಂಭವಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.



**ಪರಿಸರ ಕಾಳಜಿಯತ್ತ ನಮ್ಮ ಹೆಜ್ಜೆ 22.05.22**
ಎಲ್ಲೆಂದರಲ್ಲಿ ಬಿಸಾಡುವ ಪ್ಲಾಸ್ಟಿಕ್ ಮತ್ತು ಪ್ಲಾಸ್ಟಿಕ್ ಬಾಟಲಿಗಳನ್ನು ಉಪಯೋಗಿಸಿ ವಿದ್ಯಾರ್ಥಿಗಳು ಇಕೋಬ್ರಿಕ್ಸ್ ತಯಾರಿಸಿ ಪರಿಸರ ಕಾಳಜಿಯನ್ನು ಮೆರೆದರು.



**ಗಣರಾಜ್ಯೋತ್ಸವ:** ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಹಿರಿಯ ವಿದ್ಯಾರ್ಥಿ ಶ್ರೀ ಜಯಾನಂದ ಆಚಾರ್ಯ, ಶ್ರೀ ರಮೇಶ್ ಶ್ರೀಮಾನ್, ಪದವಿ ಉಪನ್ಯಾಸಕರಾದ ಶ್ರೀ ಯತಿರಾಜ್, ಶ್ರೀಮತಿ ಶಾಂಭವಿ ಉಪಸ್ಥಿತರಿದ್ದರು.



**ಬ್ಯಾಂಕ್ ವ್ಯವಹಾರದ ಮಾಹಿತಿ 28.01.22:** ಕರ್ನಾಟಕ ಬ್ಯಾಂಕ್ ಟ್ರಸ್ಟ್ ಆರ್ಥಿಕ ಸಾಕ್ಷರತಾ ಕೇಂದ್ರದ ಕು. ಅನುಷಾ ಇವರು ವಿದ್ಯಾರ್ಥಿಗಳಿಗೆ ಬ್ಯಾಂಕ್ ವ್ಯವಹಾರದ ಬಗ್ಗೆ ಮಾಹಿತಿಯನ್ನು ನೀಡಿದರು.

## ಪದವಿಪೂರ್ವ



**ಲಸಿಕಾ ಅಭಿಯಾನ 4.1.22**
18ವರ್ಷದೊಳಗಿನ ವಿದ್ಯಾರ್ಥಿಗಳಿಗೆ ಲಸಿಕೆ ನೀಡುವ ಅಭಿಯಾನವು ಪ.ಪೂರ್ವ ವಿಭಾಗದಲ್ಲಿ ನಡೆಯಿತು. ಬಾಳಿಲ ಪ್ರಾ.ಆ.ಕೇಂದ್ರದ ಸಿಬ್ಬಂದಿಗಳು ಸಹಕರಿಸಿದರು. 560 ವಿದ್ಯಾರ್ಥಿಗಳಿಗೆ ಲಸಿಕೆ ನೀಡಲಾಯಿತು.



**ವಿವೇಕಾನಂದ ಜಯಂತಿ ಆಚರಣೆ 12.1.2022**
ಶ್ರೀ ರಾಜಮಣಿ ರಾಮಕುಂಜ ವಿವೇಕಾನಂದರ ಚಿಂತನೆ ಹಾಗೂ ಪ್ರಸ್ತುತತೆಯನ್ನು ತಿಳಿಸಿದರು. ವಿದ್ಯಾಕೇಂದ್ರದ ಸಂಚಾಲಕರು ಶ್ರೀ ವಸಂತಮಾಧವ, ಪ್ರಾಂಶುಪಾಲರು ಶ್ರೀ ವಸಂತಬಲ್ಲಾಳ್ ಉಪಸ್ಥಿತರಿದ್ದರು.

### ಮಾಲೆಗಾಂವ್ ಖ್ಯಾತಿಯ ಕರ್ನಲ್ ಶ್ರೀಕಾಂತ್ ಪ್ರಸಾದ್ ಪುರೋಹಿತ್ ಶ್ರೀರಾಮ ವಿದ್ಯಾಕೇಂದ್ರಕ್ಕೆ ಖಾಸಗಿ ಭೇಟಿ

**ದಿನಾಂಕ 25.01.2022**









**"ಇಲ್ಲಿನ ಶಿಕ್ಷಣ ಪದ್ಧತಿಯಿಂದ ಬೆರಗುಗೊಂಡಿದ್ದೇನೆ, ಪುಳಕಿತನಾಗಿದ್ದೇನೆ ಹಾಗೂ ಉತ್ಸಾಹಿತನಾಗಿದ್ದೇನೆ. ಇದೊಂದು ಮಾದರಿ. ಅನೇಕ ವರ್ಷದ ನನ್ನ ಚಿಂತನೆ ಇಲ್ಲಿ ಸಾಕಾರಗೊಂಡಿದೆ ಎಂದರೆ ಹೆಚ್ಚಾಗಲಾರದು"**

**– ಕರ್ನಲ್ ಶ್ರೀಕಾಂತ್ ಪ್ರಸಾದ್ ಪುರೋಹಿತ್**

ಶ್ರೀ ಮೋಹನ್ ಗೌಡ, ಡಾ. ಕೃಷ್ಣಪ್ರಸಾದ್, ಡಾ. ತನ್ಮಯ್ ಗೋಸ್ವಾಮಿ, ಶ್ರೀ ಮಹೇಶ್ ಠಾಕೂರ್, ಶ್ರೀ ಬಾಲಕೃಷ್ಣ ಭಂಡಾರಿ, ಶ್ರೀ ವಿಕ್ರಮ್ ಸಾವಂತ್ ಜೊತೆಗಿದ್ದು ವಿದ್ಯಾಕೇಂದ್ರದ ಚಟುವಟಿಕೆಗಳನ್ನು ವೀಕ್ಷಿಸಿದರು





**ಅಂತರ್ ಶಾಲಾ ಕಾರ್ಯಾಗಾರ 20 ಮತ್ತು 25.01.2022:** ಅಟಲ್ ಟಿಂಕರಿಂಗ್ ಲ್ಯಾಬ್‌ನಲ್ಲಿ ವಿದ್ಯಾರ್ಥಿಗಳಿಗೆ ನಡೆಸಿದ ಕಾರ್ಯಾಗಾರವನ್ನು ಸಂಚಾಲಕರಾದ ಶ್ರೀ ವಸಂತಮಾಧವ ಉದ್ಘಾಟಿಸಿದರು. ಸರಕಾರಿ ಪ್ರೌಢಶಾಲೆ ಕಡೇಶಿವಾಲಯ ಮತ್ತು ಕೊಡ್ಮಾಣ್ ಇಲ್ಲಿನ ವಿದ್ಯಾರ್ಥಿಗಳಿಗಾಗಿ ಒಂದು ದಿನದ ಕೌಶಲ್ಯಾಧಾರಿತ ತರಬೇತಿಯನ್ನು ವಿಶ್ವಾಸ್ ಸಂಸ್ಥೆಯ ಶ್ರೀ ಮನೋಜ್ ಮತ್ತು ಸಂಯೋಜಕಿ ಶ್ರೀಮತಿ ರೋಹಿಣಿ ನೀಡಿದರು. ಬಳಿಕ ಪದವಿ ಪೂರ್ವ ವಿಭಾಗದ ಪ್ರಯೋಗಾಲಯ, ಗ್ರಂಥಾಲಯ ಹಾಗೂ ಶಾಲಾ ಪರಿಸರದ ವೀಕ್ಷಣೆ ನಡೆಯಿತು. ಕೊಡ್ಮಾಣ್ ಶಾಲಾ ಶಿಕ್ಷಕಿಯರಾದ ಶ್ರೀಮತಿ ಭಾರತಿ, ಶ್ರೀಮತಿ ರಮ್ಯಾ ಮತ್ತು ಕಡೇಶಿವಾಲಯದ ಶಿಕ್ಷಕರಾದ ಶ್ರೀ ಸತೀಶ್, ಶ್ರೀಮತಿ ಗೀತಾ ಹಾಗೂ ಪ್ರಾಂಶುಪಾಲರಾದ ಶ್ರೀ ವಸಂತ ಬಲ್ಲಾಳ್ ಉಪಸ್ಥಿತರಿದ್ದರು.




**ಮಹಾಮೇಳ (ಹೊಸ ಮತದಾರರ ನೋಂದಣಿ)**

ಮತದಾರರ ಸಾಕ್ಷರತಾ ಘಟಕ ಆಯೋಜಿಸಿದ "ಮಹಾಮೇಳ"ದಲ್ಲಿ ಬಿ.ಜೆ.ಪಿ.ಯ ಬಂಟ್ವಾಳ ಮಂಡಲದ ಪ್ರಧಾನ ಕಾರ್ಯದರ್ಶಿ ಶ್ರೀ ಡೊಂಬಯ್ಯ ಅರಳರವರು ಮಾರ್ಗದರ್ಶನ ಮಾಡಿದರು. ಬಾಳ್ತಿಲ ಗ್ರಾಮಪಂಚಾಯತಿಯ ಅಧ್ಯಕ್ಷ ಭ.ಹಿರಣ್ಮಯಿ ಅಧ್ಯಕ್ಷತೆ ವಹಿಸಿದ್ದರು, ವೇದಿಕೆಯಲ್ಲಿ ಪ್ರಾಂಶುಪಾಲರು ಹಾಗೂ ಮತದಾರರ ಸಾಕ್ಷರತಾ ಘಟಕದ ನಿರ್ದೇಶಕರಾದ ಶ್ರೀ ಗಂಧರ್ವ ಉಪಸ್ಥಿತರಿದ್ದರು.



**ಸಂವಹನ ಮತ್ತು ವೃತ್ತಿ ಮಾರ್ಗದರ್ಶನ 18.1.22**

ವಾಣಿಜ್ಯ ಸಂಘದಿಂದ ಸಂವಹನ & ವೃತ್ತಿ ಮಾರ್ಗದರ್ಶನ ಎಂಬ ವಿಷಯದ ಉಪನ್ಯಾಸ ಕಾರ್ಯಕ್ರಮವನ್ನು ಅಕ್ಷಯ ಪ್ರಥಮದರ್ಜೆ ಕಾಲೇಜು ಸಂಪ್ಯ, ಪುತ್ತೂರು ಇಲ್ಲಿನ ವಾಣಿಜ್ಯಶಾಸ್ತ್ರ ಉಪನ್ಯಾಸಕಿಯಾದ ಕು.ಭವ್ಯಶ್ರೀ ಜಿ. ಯವರು ನಡೆಸಿಕೊಟ್ಟರು.ಈ ಸಂದರ್ಭದಲ್ಲಿ ರಂಗೋಲಿ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.



**ಯುವ ಸಪ್ತಾಹದ ಸಮಾರೋಪ 18.01.22**

ರಾಷ್ಟ್ರೀಯ ಸೇವಾ ಯೋಜನೆಯ ವತಿಯಿಂದ ನಡೆದ ರಾಷ್ಟ್ರೀಯ ಯುವ ದಿನಾಚರಣೆ ಮತ್ತು ಯುವ ಸಪ್ತಾಹದ ಸಮಾರೋಪ ನಡೆಯಿತು. ವಿದ್ಯಾಕೇಂದ್ರದ ಸಂಚಾಲಕರಾದ ಶ್ರೀ ವಸಂತ ಮಾಧವ ಸಮಾರೋಪ ಭಾಷಣ ಮಾಡಿದರು. ಅಧ್ಯಕ್ಷತೆಯನ್ನು ಪದವಿ ಪ್ರಾಚಾರ್ಯರು ವಹಿಸಿದ್ದರು. ರಾಷ್ಟ್ರೀಯ ಸೇವಾ ಯೋಜನೆಯ ಸಂಯೋಜನಾಧಿಕಾರಿ ಯತಿರಾಜ್ ಪಿ ಉಪಸ್ಥಿತರಿದ್ದರು.



**ಜಿಲ್ಲಾ ಮಟ್ಟಕ್ಕೆ ಆಯ್ಕೆ 01.01.22**

ಜಿಲ್ಲಾ ಮಟ್ಟದಲ್ಲಿ ನಡೆಯುವ ಕಬಡ್ಡಿ ಕ್ರೀಡಾಕೂಟದಲ್ಲಿ ಮಹಾವಿದ್ಯಾಲಯದ ಮೂವರು ವಿದ್ಯಾರ್ಥಿನಿಯರು ಹಾಗೂ ಒಬ್ಬ ವಿದ್ಯಾರ್ಥಿ ಆಯ್ಕೆಯಾಗಿದ್ದಾರೆ.



**ವಿದ್ಯಾರ್ಥಿವೇತನಕ್ಕೆ ಅರ್ಹರಾದ ಪದವಿ ವಿದ್ಯಾರ್ಥಿಗಳು 15.01.22**

ವಿಟ್ಲದ ಸುಪ್ರಜಿತ್ ಫೌಂಡೇಶನ್ ವತಿಯಿಂದ ಕೊಡಮಾಡುವ ವಿದ್ಯಾರ್ಥಿವೇತನಕ್ಕೆ ಅರ್ಹರಾದ ಪದವಿ ವಿಭಾಗದ ವಿದ್ಯಾರ್ಥಿಗಳು.



**ಅಧ್ಯಯನ ಪ್ರವಾಸದಲ್ಲಿ ಮಾನವಿಕ ಸಂಘ**



**ಕೈಗಾರಿಕಾ ಭೇಟಿಯಲ್ಲಿ ವಾಣಿಜ್ಯ ಸಂಘ**









**ಪ್ರಾಥಮಿಕ ಶಾಲೆಯ 5,6,7ನೇ ತರಗತಿಯ ಪ್ರವಾಸ**

ಶುಭಕೋರುವ : **ಶ್ರೀರಾಮ ಸೌಹಾರ್ದ ಸಹಕಾರಿ ನಿಯಮಿತ**

ಪ್ರಧಾನ ಕಚೇರಿ: ಹನುಮಾನ್ ನಗರ, ಕಲ್ಲಡ್ಕ, ಬಂಟ್ವಾಳ ತಾಲೂಕು, 574222 ದೂ: 8255275173, 8147249174

ಶಾಖೆ : ಶ್ರೀರಾಮ ವಾಣಿಜ್ಯ ಸಂಕೀರ್ಣ ರಾಮನಗರ ಕಲ್ಲಡ್ಕ

ಕಲ್ಲಡ್ಕ ಶ್ರೀರಾಮ ವಾಣಿಜ್ಯ ಸಂಕೀರ್ಣದ ರಾಮ ನಗರ ಶಾಖೆಯಲ್ಲಿ E-Stamping ಠಸೆ ಕಾಗದ ಸೌಲಭ್ಯವಿದೆ

ಚಿನ್ನಾಭರಣ ಸಾಲ – 10.5%
ಜಾಮೀನು ಸಾಲ – 16%
ಅಡವು ಸಾಲ – 13%
ವಾಹನ ಸಾಲ – 11.5%
ಗೃಹ ನಿರ್ಮಾಣ ಸಾಲ – 11%

ಠೇವಣಿ ಮೇಲೆ ಆಕರ್ಷಕ ಬಡ್ಡಿ ದರ
91 ದಿನಗಳವರೆಗೆ – 5.5%
92 ರಿಂದ 181 ದಿನಗಳು – 6%
182ರಿಂದ 364 ದಿನಗಳು – 7%
1 ವರ್ಷ ಮೇಲ್ಪಟ್ಟು – 7.5%

ಸೌಲಭ್ಯಗಳು
ಆವರ್ತನ ಠೇವಣಿ (R.D)
ಸಂಚಯ ಠೇವಣಿ (S.D)
ನಿರಂತರ ಠೇವಣಿ (ಪಿಗ್ಮಿ)

ಹಿರಿಯ ನಾಗರಿಕರಿಗೆ, ಮಾಜಿ ಯೋಧರಿಗೆ ಮತ್ತು ವಿಧವೆಯರಿಗೆ 0.5% ಬಡ್ಡಿ ಹೆಚ್ಚಿಗೆ ನೀಡಲಾಗುವುದು

Postal Regn No. PTR/136/2022-24 Licensed to Post without pre-payment License No: SK/WPP/PTR/117/2022-24

ಸರಯೂ

Vol. : 8 Issue : 9 Rs. 10/-

KARKAN/2014/62363
Posted at Kalladka P.O. on 10th and 15th of Every month

SRI RAMA VIDYAKENDRA TRUST (R.) Hanuman Nagar, Kalladka, Bantwal Tq., Dakshina Kannada, Karnataka 574 222
Website : www.srvk.org E-mail : info@srvk.org

BOOK POST

ಸವಿಧೇ,

Sarayu Kannada Monthly Edited and Published and Printed by B. Narayana Somayaji on behalf of Sri Rama Vidyakendra Trust, Hanuman Nagara, Kalladka, Bantwal Tq, Dakshina Kannada - 574 222. Phone : 9449728763 Printed at Digantha Mudrana Ltd. Magaluru 575008, Bantwal Tq., Dakshina Kannada, Karnataka. Registration No. : KARKAN/2014/62363